# ಓಡುವಾತ ಲೆಂಕನಲ್ಲ ಬೇಡುವಾತ ಭಕ್ತನಲ್ಲ

## Oduvatha Lenkanalla Beduvatha Bhakthanalla

***C.A.Ramesh, Associate Professor of Kannada, Government College for Women, Kolar.**

**ಲೆಂಕವಾಳಿ ಮರಣ**

ಹಿಂದಿನ ಕಾಲದಲ್ಲಿ ರಾಜವ್ಯವಸ್ಥೆಯ ಊಳಿಗದಲ್ಲಿ ಜೋಳವಾಳಿ, ವೇಳೆವಾಳಿ ಸಂಪ್ರದಾಯಗಳಂತೆ ನಡೆದುಕೊಂಡು ಬಂದ ಇನ್ನೊಂದು ಮರಣ ಪದ್ಧತಿ 'ಲೆಂಕವಾಳಿ'ಯಾಗಿದೆ. ಇದು ರಾಜನಿಷ್ಟೆಯ ಸೇವಕತನದಲ್ಲಿ ನಡೆದುಕೊಂಡು ಬಂದ ಆಚರಣೆಯಾಗಿದ್ದು ಲೆಂಕ–ಅಂಕ ಎಂಬ ಪರಿಭಾಷೆಯಲ್ಲಿ ಸಂಬಂಧ ಹೊಂದಿದೆ. ಪ್ರಾಚೀನ ಕಾಲ ಮತ್ತು ಮಧ್ಯಕಾಲೀನ ಸಾಹಿತ್ಯಗಳಲ್ಲಿ ಈ ಪರಿಭಾಷೆ ಕಂಡು ಬಂದಿದೆ. ಪ್ರಾಚೀನ ಸಾಹಿತ್ಯ ಕೃತಿಗಳು 'ಲೆಂಕ' ಎಂಬುದಕ್ಕೆ 'ಸೈನಿಕ' 'ವೀರಸೈನಿಕ' ಎಂಬ ಅರ್ಥವನ್ನು ಹೇಳಿದ್ದು ವೀರರಾದ ಸೈನಿಕರು ಅರಸನಿಗಾಗಿ ಹೋರಾಡಿ ಪ್ರಾಣಾರ್ಪಣೆ ಮಾಡಿಕೊಳ್ಳುವ ಸಂಪ್ರದಾಯವಾಗಿದೆ. ಇದು ರಾಜವ್ಯವಸ್ಥೆಯ ಜೋಳವಾಳಿ, ವೇಳೆವಾಳಿ, ಸಂಪ್ರದಾಯಗಳ ಮುಂದುವರೆದ ಭಾಗವಾಗಿ 'ಲೆಂಕವಾಳಿ'ಯಾಗಿ ನಡೆದುಕೊಂಡು ಬಂದಂತೆ ಕಾಣುತ್ತದೆ. ಪ್ರಾಚೀನ ಕಾಲದಲ್ಲಿ ರಾಜನ ಪರವಾಗಿ ಹೋರಾಟ ಮಾಡಲು 'ಲೆಂಕವಾಳಿ'ಗಳ ಒಂದು ಪಡೆ ಇದ್ದುದ್ದನ್ನು ಕಾವ್ಯಗಳು ತಿಳಿಸುತ್ತವೆ. ಇಂತಹ ಅನೇಕ ಲೆಂಕವಾಳಿ ವೀರರು ರಾಜನ ಪರವಾಗಿ ಹೋರಾಡಿ ವೀರ ಮರಣ ಪಡೆಯುತ್ತಿದ್ದರು. ರಾಜವ್ಯವಸ್ಥೆಯ ಸ್ವಾರ್ಥದಿಂದ ಇಂತಹ ಅನೇಕ ಸಂಪ್ರದಾಯಗಳು ಕರ್ನಾಟಕದಲ್ಲಿ ಹಿಂದಿನಿಂದಲು ನಡೆದುಕೊಂಡು ಬಂದಿವೆ.

ಕರ್ನಾಟಕದಲ್ಲಿ ವೀರರ ವೀರಗಲ್ಲುಗಳು, ಸಮಾಧಿಗಳು ಬಹು ಹಿಂದಿನ ಕಾಲದಿಂದಲು ನಡೆದುಕೊಂಡು ಬಂದ ವೀರರ ಪ್ರಾಣ ಹಾನಿಯನ್ನು ತಿಳಿಸುತ್ತವೆ. ವಚನಕಾರರು ರಾಜನ ಸ್ವಾರ್ಥದ ಕಾರಣದಿಂದ ನಡೆಯುವ ಇಂತಹ ಜೀವಹತ್ಯೆಗಳನ್ನು ವಿರೋಧಿಸುವ ಮೂಲಕ ಪ್ರತಿಕ್ರಿಯೆ ನೀಡುತ್ತಾರೆ. ಸ್ವತಃ ಬಸವಣ್ಣನವರು[38]

**ಓಡುವಾತ ಲೆಂಕನಲ್ಲ ಬೇಡುವಾತ ಭಕ್ತನಲ್ಲ!**
**ಓಡಲಾಗದು ಲೆಂಕನು ಬೇಡಲಾಗದು ಲೆಂಕನು!**
**ಓಡೆನಯ್ಯ, ಬೇಡೆನಯ್ಯ ಕೂಡಲಸಂಗಮದೇವಾ**

ಎನ್ನುವ ಮೂಲಕ ಲೆಂಕತನ ನೆಡೆಸಿಕೊಳ್ಳುವ ವೀರಸೈನಿಕರ ಪರಾಕ್ರಮವನ್ನು ಹೇಳಿದರು 'ಓಡೆನಯ್ಯ' 'ಬೇಡೆನಯ್ಯ' ಎಂದು ಹೇಳುವ ಮೂಲಕ ಈ ಪದ್ಧತಿಯನ್ನು ತಿರಸ್ಕರಿಸುವುದನ್ನು ಕಾಣುತ್ತೇವೆ. ವಚನಕಾರರು ರಾಜಾಶ್ರಿತವಾಗಿ ನಡೆದುಕೊಂಡು ಬಂದ ಇಂತಹ ಸಂಪ್ರದಾಯಗಳನ್ನು ಮುರಿದು ಹಾಕುವ ಮೂಲಕ ಭಕ್ತರಿಗೆ ಇಂತಹ ಆಚರಣೆಗಳಲ್ಲಿ ಜೀವಹಾನಿ ಮಾಡಿಕೊಳ್ಳಲು ಅವಕಾಶ ಮಾಡಿಕೊಡದೆ ಸೃಷ್ಟಿಯ ನಿಯಮದಲ್ಲಿ ಪ್ರಾಣದ ಮಹತ್ವವನ್ನು ಇಂತಹ ವೈಚಾರಿಕ ವಿಚಾರಧಾರೆಗಳ ಮೂಲಕ ಪ್ರಸ್ತಾಪಿಸಿದರು. ಅಲ್ಲಮನಂತಹ ಸಾತ್ವಿಕ ವ್ಯಕ್ತಿ, ಅನುಭಾವಿ ರಾಜನಿಗೆ ಲೆಂಕನಾಗಿ ನಡೆದುಕೊಳ್ಳುವುದಕ್ಕಿಂತ ಗುರುವಿಗೆ, ಲಿಂಗಕ್ಕೆ ಭವದಲೆಂಕನಾಗಿ ನಡೆದುಕೊಳ್ಳುವ ಸಂಪ್ರದಾಯವನ್ನು ಹೇಳುತ್ತಾ

**ಉಪಚಾರದ ಗುರುವಿಂಗೆ ಉಪಚಾರದ ಶಿಷ್ಯ**
**ಉಪಚಾರದ ಲಿಂಗ, ಉಪಚಾರದ ಜಂಗಮ**
**ಉಪಚಾರದ ಪ್ರಸಾದವ ಕೊಂಡು, ಗುರುವಿಂಗೆ ಭವದ ಲೆಂಕನಾಗಿ**[39]

ಎಂದು ಲೌಕಿಕ ಆಚಾರಕ್ಕಿಂತ ಭಿನ್ನವಾದ ಧಾರ್ಮಿಕ ಆಚರಣೆಯನ್ನು ಭವದ ಲೆಂಕನಾಗಿ ಎಂಬ ಇನ್ನೊಂದು ಆಚಾರದಲ್ಲಿ ವಚನಕಾರರು ಚಿಂತನೆ ಮಾಡಿದ್ದಾರೆ.

**ಮಹಾಸತಿಮರಣ**

ಮಹಾಸತಿಮರಣವು ಪತಿಪತ್ನಿ ಸಂಬಂಧದ ಪಾವಿತ್ರತೆಯ ಮನೋಭಾವದಲ್ಲಿ ನಡೆಯುವಂತಹ ಆಚರಣೆಯಾಗಿದೆ. ಇದು ಗಂಡನು ಮರಣ ಹೊಂದಿದ ನಂತರ ಆತನ ಶವದೊಂದಿಗೆ ತಾನು ಜೀವಂತವಾಗಿ ಅಗ್ನಿ ಪ್ರವೇಶ ಮಾಡಿ ಮರಣ ಪಡೆಯುವುದು ಸಹಗಮನ ಮರಣವಾಗಿದೆ. ಕೆಲವು ಸಂದರ್ಭದಲ್ಲಿ ಗಂಡನ ಜೊತೆಗೆ ಸಾಯದೆ ಗಂಡ ದೂರದ ಸ್ಥಳದಲ್ಲಿ ಸತ್ತರೆ, ಅವನ ಶವ ಲಭ್ಯವಿಲ್ಲದಿದ್ದಾಗ ಅವನಿಗೆ ಸಂಬಂಧಿಸಿದ ಯಾವುದಾದರೊಂದು ವಸ್ತು ಬಂದರೆ ಅದನ್ನು ಗುರುತಿಸಿ ಸ್ಪಷ್ಟಪಡಿಸಿಕೊಳ್ಳುತ್ತಿದ್ದರು. ಆನಂತರ ಆ ವಸ್ತುವನ್ನು ಹಿಡಿದುಕೊಂಡು ಚಿತೆಯನ್ನು ಪ್ರವೇಶ ಮಾಡುವುದರ ಮೂಲಕ ಅವನ ಹೆಂಡತಿ ಮರಣವನ್ನು ಪಡೆಯುತ್ತಿದ್ದಳು. ಇಂತಹ ಮರಣವನ್ನು 'ಅನುಗಮನ' ಮರಣವೆಂದು ಕರೆಯಲಾಗುತ್ತಿತ್ತು. ಮಧ್ಯಕಾಲೀನ ಸಂದರ್ಭದಲ್ಲಿ ಮುಸ್ಲಿಂರ ದಾಳಿಗಳು ಭಾರತ ಮತ್ತು ಕರ್ನಾಟಕದ ಮೇಲೆ ಹೆಚ್ಚಾಗಿರುವುದರ ಕಾರಣವಾಗಿ ಸಹಗಮನ ಮರಣ ಹೆಚ್ಚು ನಡೆದಂತೆ ಕಾಣುತ್ತದೆ. ಇಂತಹ ಸಂದರ್ಭದಲ್ಲಿ ಕರ್ನಾಟಕದಲ್ಲಿ ಶಿವಶರಣರು ಸ್ತ್ರೀ ಆತ್ಮಗೌರವ ಅವಳ ಅಸ್ತಿತ್ವದ ಬಗ್ಗೆ ಖಾಳಜಿ ಹೊಂದಿ ವೈಚಾರಿಕವಾದ ಚಿಂತನೆಗಳನ್ನು ಮಾಡುವುದರ ಮೂಲಕ ಸಹಗಮನ ಮರಣವನ್ನು ವಿರೋಧಿಸಿರುವುದನ್ನು ಕಾಣುತ್ತೇವೆ. ಷಣ್ಮುಖಸ್ವಾಮಿ[40] ಎಂಬ ವಚನಕಾರ.

**ಗಂಡ ಸತ್ತನೆಂದು ಗಂಡನೊಡನೆ ಕೆಂಡವ ಬೀಳುವೆನೆಂದು**
**ಪುಂಡ ವೀರಸ್ತ್ರೀ ತಾನು ದಂಡೆಯ ಕಟ್ಟಿಕೊಂಡು ಖಂಡೆಯವ ಹಿಡಿದು**
**ತಂಡ ತಂಡದ ಜನರ ಮುಂದೆ ಮೆರೆದುಕೊಂಡು ಬಂದು**
**ಕಿಚ್ಚಿನ ಹೊಂಡವ ಕಂಡು ಹೆದರಿ ಹಿಮ್ಮೆಟ್ಟಿದರೆ**
**ಅವಳಿಗದೆ ಭಂಗವಲ್ಲದೆ ಶೃಂಗಾರ ಮೆರೆವುದೆ ಅಯ್ಯಾ?**
**ಪತಿಲಿಂಗ ಸತಿ ಶರಣ ತನ್ನ ಪತಿವ್ರತಾ ಭಾಷೆಯ ನುಡಿದು**
**ನಡೆಯಲ್ಲಿ ತಪ್ಪಿದಡೆ ಅವನ ಭಂಗಕ್ಕೆ ತುದಿ ಮೊದಲಿಲ್ಲ ನೋಡಾ ಅಖಂಡೇಶ್ವರಾ'**

ಎಂದು ಹೇಳುವ ಮೂಲಕ ಇಲ್ಲಿಯ ವಚನದಲ್ಲಿ ಮಾಸ್ತಿಯ ಧೈರ್ಯವನ್ನು ಉಪಮಾನವಾಗಿ ಬಳಸಿದ್ದರು. **"ಲಂಡಸ್ತ್ರೀ", "ಪುಂಡಸ್ತ್ರೀ"** ಎಂಬ ಮಾತುಗಳನ್ನು ವಚನಗಳ ಮೂಲಕ ಹೇಳುವಲ್ಲಿ ಸಹಗಮನ ಮರಣವನ್ನು ವಿರೋಧಿಸುತ್ತಾರೆ. ಮಹಾಸತಿ ಮರಣದ ಬಗ್ಗೆ ಬಹುತೇಕ ವಚನಕಾರರು ಇಂತಹ ನಿಲುವನ್ನು ತಾಳಿದ್ದಾರೆ. ಅದರಲ್ಲಿ ಬಸವಣ್ಣನವರು[41]

**ಮುನ್ನಿನ ಪುರುಷವ್ರತಿಯರು ಒಲಿಸಿದ ಆಯತವ**
**ಪರಿಪರಿಯಲು ಬಣ್ಣಿಸಲು ಬಹುದಲ್ಲದೆ**
**ಪುರುಷ ನಿರ್ವಾಣಕ್ಕುರಿವಗ್ನಿಯ ಬಂದು ಹೊಕ್ಕು ತೋರಲು ಬಾರದು**

ಎಂದು ಹೇಳುವ ಮೂಲಕ ಪತ್ನಿಯ ಸಾವಿಗಾಗಿ ಉರಿವ ಅಗ್ನಿಯನ್ನು ಸ್ತ್ರೀ ಪ್ರವೇಶಿಸಬಾರದೆಂದು ತಿರಸ್ಕಾರದಿಂದ ಹೇಳಿದ್ದಾರೆ. ಮಾದರ ಧೂಳಯ್ಯ[42] ಎಂಬ ವಚನಕಾರ ತನ್ನ ವಚನದಲ್ಲಿ

**ಧೀರೆಯಾದ ಮಾಸ್ತಿಗೆ ವೀರತ್ವವಲ್ಲದೆ**
**ಧಾರುಣಿಯ ಜನರೆಲ್ಲರೂ ಹೇಡಿ ಮಾಸ್ತಿ ಎಂಬ ಬಳಿಕ ವೀರತ್ವಯಲ್ಲಿದೋ?**
**ಧೀರೆಯಾದ ಮಾಸ್ತಿಯ, ವೀರರಾಗಿದ್ದವರು**
**ಮುಡಿಯಲರ ಹಿಡಿದ ಲಿಂಬೆಯ ಹಣ್ಣ ಬೇಡಿದಡೆ ಕೊಡುವಳು;**
**ದೃಢವುಳ್ಳ, ವೀರರು ತರುವರು;**
**ದೃಷ್ಟವ ನೋಡಿರಣ್ಣ, ಕೊಡುವಾಕೆ ದಹನವಾದಳು ಕೊಂಬಾತ ರೂಪಾದ**
**ಈತ ಬೇಡಿದ ಇಷ್ಟವ ಕೊಟ್ಟುತನುಯಾತವೊ**
**ಆತ್ಮನೋ ಬಲ್ಲಡೆ ನೀವು ಹೇಳಿರಣ್ಣ,**
**ನಿಮ್ಮ ಜ್ಞಾನದ ಮುಸುಕು ತಱಿದು ನಿಮ್ಮ ಬಲ್ಲವಂತಿಕೆಯ ಕಾಣಬಹುದು.**
**ಕಾಮಧೂಮ ಧೂಳೇಶ್ವರ ಲಿಂಗ ನಱಿವುದಕ್ಕೆ ಇದೆ ದೃಷ್ಟ"**

ಎಂದು ವಚನದಲ್ಲಿ ಮೇಲಿನ ಒಂದು ಭಾಗದಲ್ಲಿ ಮಾಸ್ತಿ ಮರಣ ಆಚರಣೆಯ ಸಂಪ್ರದಾಯಗಳನ್ನು ಹೇಳಲಾಗಿದೆ. ಈ ಭಾಗದಲ್ಲಿ ಜ್ಞಾನದ ಮುಸುಕ ತೆರೆಯುವ ಮೂಲಕ ಅಜ್ಞಾನವನ್ನು ದೂರಮಾಡಿ ಇಂತಹ ಮೂಢನಂಬಿಕೆಯ ಆಚರಣೆಗಳನ್ನು ದೂರ ಮಾಡಬೇಕೆಂದು ಹೇಳಲಾಗಿದೆ. ಕನ್ನಡದ ಮೊದಲ ಕವಿಯತ್ರಿಯಾದ ಅಕ್ಕಮಹಾದೇವಿ[43] ತನ್ನ ಒಂದು ವಚನದಲ್ಲಿ ಸಹಗಮನ ಮರಣ ವಿರೋಧಿಸುವ ಮೂಲಕ ಸ್ತ್ರೀಯ ಪರವಾದ ನಿಲುವನ್ನು **'ಕೊಂಡಕ್ಕೆ ಬೀಳ್ವಂತ ಲಂಡಸ್ತ್ರೀಯಳು ತಾನು।ದಂಡೆಯ ಕುಣಿಕೆ ಸಡಿಲಿಸಿ ಕೊಂಡದ।ಕೆಂಡದೊಳಾಳಿ ಮುಳುಗಿದಳು॥**ಎಂದು ಹೇಳುವ ಮೂಲಕ ಕೊಂಡಕ್ಕೆ ಬೀಳುವ ಸ್ತ್ರೀಯನ್ನು 'ಲಂಡಸ್ತ್ರೀ' ಎನ್ನುವಲ್ಲಿ ಸಹಗಮನ ಮರಣ ಸಂಪ್ರದಾಯವನ್ನು ವಿರೋಧಿಸಿರುವುದನ್ನು ಕಾಣುತ್ತೇವೆ.

**ಅಡಿಟಿಪ್ಪಣಿಗಳು:–**

- ಲೀಲಾದೇವಿ ಆರ್. ಪ್ರಸಾದ್: ಉಡುತಡಿಯ ಅಕ್ಕಮಹಾದೇವಿ, ಬಸವಸಮಿತಿ, ಬೆಂಗಳೂರು, 2010, ಪು.14.
- ಬ್ಯಾಡನೂರು, ಶಾಂತವೀರಪ್ಪ: ಚಂದಿಮರಸ, ಬಸವ ಸಮಿತಿ, ಬೆಂಗಳೂರು, 2010, ಪು.21.
- ಬಸವರಾಜು, ಎಲ್.: ಸಂ. ಬಸವಣ್ಣನವರ ವಚನಗಳು, ಗೀತಾ ಬುಕ್ ಹೌಸ್, ಮೈಸೂರು, 2008, ಪು.127, ವ.385.
- ಭೂಸನೂರಮಠ, ಸಂ.ಶಿ.: ಸಂ. ವಚನ ಸಾಹಿತ್ಯ ಸಂಗ್ರಹ, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, 2006, ಪು.175, ವ.14.
- ಬಸವರಾಜು, ಎಲ್.: ಸಂ. ಬಸವಣ್ಣನವರ ವಚನಗಳು, ಗೀತಾ ಬುಕ್ ಹೌಸ್, ಮೈಸೂರು, 2008, ಪು.76, ವ.170.
- ಅದೇ.ಪು.113, ವ.328.
- ಪ್ರಸನ್ನಕುಮಾರ್, ಎಂ.: ಕೊಂಡಗುಳಿ ಕೇಶಿರಾಜ, ಬಸವ ಸಮಿತಿ, ಬೆಂಗಳೂರು, 2010, ಪು.12–13.
- ನಾಗಯ್ಯ, ಜೆ.ಎಂ., ಹಿರೇಮಠ, ಕೆ.ಎಸ್.: ಮಹಾಮರಣ, ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ, 2011, 61.
- ಕಲಬುರ್ಗಿ, ಎಂ.ಎಂ.: ಸಂ.ಬಸವಯುಗದ ವಚನ ಮಹಾಸಂಪುಟ–1, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2016, ಪು.339. ವ.425.
- ಉಧೃತ: ಮಹಾಮರಣ: ಸಂ. ನಾಗಯ್ಯ, ಜೆ.ಎಂ., ಹಿರೇಮಠ, ಕೆ.ಎಸ್.: ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ, 2011, ಪು.63.
- ಬಸವರಾಜು, ಎಲ್.: ಸಂ. ಬಸವಣ್ಣನವರ ವಚನಗಳು, ಗೀತಾಬುಕ್ ಹೌಸ್, ಮೈಸೂರು, 2008, ಪು.82, ವ.202.
- ಉಧೃತ: ಮಹಾಮರಣ: ಸಂ. ನಾಗಯ್ಯ, ಜೆ.ಎಂ., ಹಿರೇಮಠ, ಕೆ.ಎಸ್.: ಸಿದ್ಧಂಗೇಶ್ವರ ಪ್ರಕಾಶನ, ಗುಲಬರ್ಗಾ, 2011, ಪು.65.
- ಕಲಬುರ್ಗಿ, ಎಂ.ಎಂ.: ಸಂ.ಬಸವಯುಗದ ವಚನ ಸಂಪುಟ–1, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2016, ಪು.339. ವ.426.
- ಮರುಳಸಿದ್ಧಪ್ಪ, ಕೆ., ನಾಗರಾಜ, ಕಿ.ರಂ.: ಸಂ. ವಚನ ಕಮ್ಮಟ, ಸಪ್ನ ಬುಕ್ ಹೌಸ್, ಬೆಂಗಳೂರು, 2012, ಪು. 10, ವ.35.
- ಬಸವರಾಜು, ಎಲ್.: ಸಂ. ಅಲ್ಲಮನ ವಚನಗಳು, ಗೀತಾ ಬುಕ್ ಹೌಸ್, ಮೈಸೂರು, 2008, ಪು.118, ವ.271.
- ಬಸವರಾಜು, ಎಲ್.: ಸಂ.ಬಸವ ವಚನಾಮೃತ ಭಾಗ–2, ಬಸವ ಸಮಿತಿ, ಬೆಂಗಳೂರು, 1989, ಪು.102.
- ಬಸವರಾಜು, ಎಲ್.: ಸಂ. ಬಸವಣ್ಣನವರ ವಚನಗಳು, ಗೀತಾ ಬುಕ್ ಹೌಸ್, ಮೈಸೂರು, 2008, ಪು.76, ವ.170.
- ಜೈನಕೇರಿ, ಜಯದೇವಪ್ಪ: ತುರುಗಾಹಿರಾಮಣ್ಣ, ಬಸವ ಸಮಿತಿ, ಬೆಂಗಳೂರು, 2010, ಪು.17.
- ಮರುಳಸಿದ್ಧಪ್ಪ, ಕೆ., ನಾಗರಾಜ, ಕಿ.ರಂ.: ಸಂ. ವಚನ ಕಮ್ಮಟ, ಸಪ್ನ ಬುಕ್ ಹೌಸ್, 2012 ಪು.118, ವ.449.
- ಬಸವರಾಜು, ಎಲ್.: ಸಂ. ಬಸವ ವಚನಾಮೃತ ಭಾಗ–2, ಬಸವ ಸಮಿತಿ, ಬೆಂಗಳೂರು, 1989, ಪು.110, ವ.105.